13) ಮಂಗಳೂರು ತಾಲ್ಲೂಕಿನ ಅಣಬೆ ಗ್ರಾಮದ ಹತ್ತಿರ ಕರ್ನಾಟಕ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್‌ನವರು ವಶಪಡಿಸಿಕೊಂಡಿರುವ ಜಮೀನಿನ ಮಾಲೀಕರಿಗೆ ಪುನರ್‌ವಸತಿ ಕಲ್ಪಿಸುವುದು.

ಶ್ರೀ ಎ. ರುಕ್ಮಯ್ಯ ಪೂಜಾರಿ.—ಮಾನ್ಯ ಉಪಾಧ್ಯಕ್ಷರೇ, ೧೯೬೯ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನ ಬೈಕಂಪಾಡಿ, ಪಣಂಬೂರು, ಅಣಬೆ ಗ್ರಾಮದ ೯೩೮ ಎಕರೆ ಫಲವತ್ತಾದ ಕೃಷಿ ಭೂಮಿಯನ್ನು ಕರ್ನಾಟಕ ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡಿನವರು ಸ್ವಾಧೀನಪಡಿಸಿದ್ದು, ಭೂಸುಧಾರಣ ಕಾಯ್ದೆ ಬಂದಿದ್ದರೂ ಮೊದಲು ಜಮೀನ್ದಾರರಿಗೆ ಮಾತ್ರ ನಿವೇಶನಗಳನ್ನು ಅಲ್ಲಿಂದ ಹತ್ತು ಕಿಲೋಮೀಟರ್ ದೂರದ ಕಾಟಪಳ್ಳದಲ್ಲಿ ತಲಾ ೧೨ ಸೆಂಟ್ಸ್ ಸ್ಥಳ ನಿವೇಶನಕ್ಕೆ ಸಿಕ್ಕಿದ್ದರೂ ಒಕ್ಕಲು ಕುಟುಂಬಸ್ಥರಿಗೆ ಯಾವುದೇ ಮನೆ ನಿವೇಶನ ಅಥವಾ ಪರಿಹಾರ ಸಿಗದ ಕಾರಣ ೩೦ದಿಗೂ ಸುಮಾರು ೧೦೨ ಕುಟುಂಬಸ್ಥರು ಸದ್ರಿ ಬೋರ್ಡಿನವರು ಸ್ವಾಧೀನಪಡಿಸಿದ ಸ್ಥಳದಲ್ಲಿಯೇ ವಾಸ್ತವಿಸಿಕೊಂಡು ಬರುತ್ತಿದ್ದಾರೆ. ಆದರೆ ಬೋರ್ಡಿನವರು ಅವರನ್ನು ಸದ್ರಿ ಸ್ಥಳವನ್ನು ತೆರವು ಮಾಡಲು ಒತ್ತಾಯಿಸುತ್ತಿದ್ದಾರೆ.

ಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡಿನವರು ಈಗಾಗಲೇ ಸ್ವಾಧೀನಪಡಿಸಿದ ಸುಮಾರು ೭೦೦ ಎಕರೆ ಭೂಮಿಯನ್ನು ಮಾತ್ರ ಕೈಗಾರಿಕಾ ನಿರ್ಮಾಣದ ಉದ್ದೇಶಕ್ಕೆ ಉಪಯೋಗಿಸಿಕೊಂಡಿದ್ದು ಉಳಿದ ಸುಮಾರು ೨೦೦ ಎಕರೆ ಜಾಗ ನಿರ್ವಾಸಿತರ ಪರಿಸರದಲ್ಲಿ ಬಾಕಿ ಇರುವುದು ಗಮನಾರ್ಹ ಆದ್ದರಿಂದ ಈ ೧೦೨ ಕುಟುಂಬಸ್ಥರಿಗೆ ಪುನರ್ವಸತಿ ಕಲ್ಪಿಸುವ ದೃಷ್ಟಿಯಿಂದ ಸಂಬಂಧಪಟ್ಟವರಿಗೆ ಹಲವಾರು ಸಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಸದ್ರಿ ಕುಟುಂಬಸ್ಥರು ಯಾವುದೇ ಭರವಸೆ ಇಲ್ಲದೆ ಕಂಗಾಲಾಗಿದ್ದಾರೆ. ಆದ್ದರಿಂದ ಸರ್ಕಾರ ಈ ಬಗ್ಗೆ ಗಮನ ಹರಿಸಿ ಬೋರ್ಡಿನವರ ಸ್ವಾಧೀನವಿರುವ ಪ್ರದೇಶದ ಉತ್ತರ ಪಾರ್ಶ್ವದಲ್ಲಿ ಸುಮಾರು ೨೦ ಎಕರೆ ಜಾಗವನ್ನು ತೆಗೆದುಕೊಂಡು ಅಲ್ಲಿ ವ್ಯವಸ್ಥೆ ಮಾಡಿ ಸದ್ರಿ ಕುಟುಂಬಸ್ಥರಿಗೆ ಪುನರ್ವಸತಿ ಕಲ್ಪಿಸಿಕೊಡಬೇಕಾಗಿ ಸರ್ಕಾರದ ಗಮನಕ್ಕೆ ತರಲು ಬಯಸುತ್ತೇನೆ.

ಶ್ರೀ ಹೆಚ್. ಆರ್. ರಾಜು.—ಉತ್ತರವನ್ನು ಆಮೇಲೆ ತರಿಸಿಕೊಡುತ್ತೇನೆ.

## ಕೋಕೋ ಮತ್ತು ರಬ್ಬರ್ ಬೆಳೆಗಳನ್ನು ಕರ್ನಾಟಕ ಅರಣ್ಯ ಕಾಯಿದೆಯಿಂದ ಹೊರತುಪಡಿಸುವ ಬಗ್ಗೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಉಪಾಧ್ಯಕ್ಷರೇ, ಕಾರ್ಕಳದಲ್ಲಿ ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಕೋ, ಕೋಡು, ರಬ್ಬರು ಹಾಲು ಮತ್ತು ರಬ್ಬರು ಹಾಳಿಗಳನ್ನು ಸಾವಿರಾರು ರೈತರು ಬೆಳೆಸುತ್ತಿದ್ದಾರೆ ಅವು ನಿಜವಾಗಿಯೂ ಕಾಡು ಉತ್ಪತ್ತಿಗಳು. ಅದನ್ನೀಗ ಕರ್ನಾಟಕ ಅರಣ್ಯ ಕಾಯಿದೆಗೆ ಒಳಪಡಿಸಲಾಗಿದೆ. ಇದರಿಂದಾಗಿ ನಿಜವಾದ ರೈತರಿಗೆ ಭಾರೀ ಕಿರುಕುಳವುಂಟಾಗಿರುತ್ತದೆ. ಭ್ರಷ್ಟಾಚಾರಕ್ಕೂ ಇದರಿಂದ ಅವಕಾಶ ಒದಗುತ್ತದೆ.

ಆದಕಾರಣ ಕೋಕೋ ಮತ್ತು ರಬ್ಬರ್ ಬೆಳೆಗಳನ್ನು ಕರ್ನಾಟಕ ಅರಣ್ಯ ಕಾಯಿದೆಯಿಂದ ಹೊರತುಪಡಿಸಬೇಕು. ಕೋಕೋ ಮತ್ತು ರಬ್ಬರು ಕಾಡು ಉತ್ಪನ್ನಗಳೆಂದು ಪರಿಗಣಿಸಬೇಕು, ಹಾಗಾದಲ್ಲಿ ಮಾತ್ರ ಸದ್ರಿ ಬೆಳೆ ಬೆಳೆಸುವ ರೈತರಿಗೆ ಪ್ರಯೋಜನವಾಗುತ್ತದೆ, ಈ ಕುರಿತು ಕೃಷಿ ಸಚಿವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಸಚಿವರು).—ಮಾನ್ಯ ಉಪಾಧ್ಯಕ್ಷಿಣಿಯವರೆ, ನಾನು ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಸರ್ಕಾರದನಿಗಮಗಳ ರಬ್ಬರ್ ಮತ್ತು ಕೋಕೋ ನೆಡುತೋಪ್ಪುಗಳಲ್ಲಿ ಬೆಳೆಯುವ ರಬ್ಬರ್ ಮತ್ತು ಕೋಕೋಮಿನ ಕಳ್ಳಸಾಗಾಣಿಕೆಯಾಗದಿರುವ ರೀತಿಯಲ್ಲಿ ತಡೆಗಟ್ಟಲು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಪ್ರಸ್ತಾವನೆಯನ್ನು ಆಲಂಬಿಸಿ ಕರ್ನಾಟಕ ಅರಣ್ಯ ಅಧಿನಿಯಮ ೧೯೬೩ಕ್ಕೆ ತಿದ್ದುಪಡಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿತ್ತು. ಈ ಪ್ರಸ್ತಾವನೆಯ ಪ್ರಕಾರ ರಬ್ಬರ್ ಲ್ಯಾಟಿಕ್ಸ್ ಮತ್ತು ಕೋಕೋ ಬೀನ್ಸ್ ಅಥವಾ ಪಾಡ್ಸ್‌ನ್ನು ಅರಣ್ಯಗಳಲ್ಲಿರಲಿ ಅಥವಾ ಅರಣ್ಯಗಳಿಂದಾಗಲೀ ಅಥವಾ ಇನ್ನಾವುದೇ ಮೂಲ